ಭವಸಾಗರವ ದಾಟಿಸುವ ಎಂದು ಕಾಶಿ ವಿಶ್ವನಾಥನ ಪ್ರಾರ್ಥಿಸುತ್ತ, ಗಂಗಾನದಿಯಲ್ಲಿ ದೋಣಿಯನ್ನು ಹುಟ್ಟು ಹಾಕುತ್ತಿರುವ ಸಾಧು



ಅಶೋಕ ಚಕ್ರವರ್ತಿಯ ನಾಲ್ಕು ಸಿಂಹಗಳ ಲಾಂಛನವಿರುವುದು ಸಾರನಾಥದ ಮ್ಯೂಸಿಯಂನಲ್ಲಿ. ಸಾರನಾಥವಿರುವುದು ಪವಿತ್ರ ಕ್ಷೇತ್ರ ಕಾಶಿಯ ವಿಶ್ವನಾಥ ಮಂದಿರದಿಂದ ಉತ್ತರಕ್ಕೆ ಒಂಬತ್ತು ಕಿಲೋಮೀಟರುಗಳ ದೂರದಲ್ಲಿ. ನೀವು ಉಳಿದುಕೊಂಡ ಹೋಟೆಲಿನಿಂದ ಹೊರಟರೆ, ಬನಾರಸವಾಲಾ ತನ್ನ ಬಣ್ಣಗಟ್ಟಿದ ಕೈಗಳಿಂದ ಮಡಿಸಿಕೊಟ್ಟ ಪಾನನ್ನು ನಿಧಾನಕ್ಕೆ ಜಗಿದು ಮುಗಿಸುವುದರೊಳಗೆ ನಿಮ್ಮ ಆಟೋ ಮ್ಯೂಸಿಯಂನ ಗೇಟಿನ ಮುಂದಿರುತ್ತದೆ. ನಾಲ್ಕು ಗಂಭೀರ ಸಿಂಹಗಳು ದಿಕ್ಕುಗಳನ್ನು ಹಂಚಿಕೊಂಡವಂತೆ ಕುಳಿತು ಲೋಕವನ್ನು ಗಮನಿಸುವ ಕಾರ್ಯದಲ್ಲಿ ತೊಡಗಿ ಎರಡು ಸಾವಿರದ ಮುನ್ನೂರು ವರ್ಷಗಳಾದವು. ಈ ಸಿಂಹಗಳು ಭರತಖಂಡದ ನಾಗರಿಕತೆಯ ಏಳುಬೀಳುಗಳಲ್ಲಿ ಬಹುಪಾಲನ್ನು ಕಂಡಿವೆ. ಒಂದು ಕಾಲದಲ್ಲಿ ಎತ್ತರದ ಸ್ತಂಭದ ಮೇಲೆ ಪ್ರತಿಷ್ಠಾಪಿತಗೊಂಡವು ಈಗ ಕಂಬವನ್ನು ಕಳೆದುಕೊಂಡು ಮ್ಯೂಸಿಯಂ ಸೇರಿ ಅಲ್ಲಿ ದೊಡ್ಡ ಆಕರ್ಷಣೆಯಾಗಿ ಉಳಿದಿವೆ. ಮ್ಯೂಸಿಯಮ್ಮಿನ ಪಕ್ಕದಲ್ಲೇ ಉತ್ಖನನಗೊಂಡ ವಿಶಾಲ ಬಯಲು. ಬಯಲಿನ ನಡುವೆ ಎತ್ತರದ ಸ್ತೂಪ. ಸುತ್ತಕ್ಕೂ ಅನಾವರಣಗೊಳ್ಳುವ ಬುದ್ಧನ ನೂರಾರು ಕತೆಗಳು ಮತ್ತು ಪ್ರತಿಮೆಗಳು. ಅಡಿಗಡಿಗೂ ಚಕ್ರವರ್ತಿಯೊಬ್ಬನ ಧರ್ಮಬದ್ಧತೆಗೆ ಹರಡಿಬಿದ್ದ ಸಾಕ್ಷಿಗಳು. ಈ ಸಿಂಹಗಳ ಕೆಳಗಿನ ಪೀಠದಲ್ಲಿ ಧರ್ಮಚಕ್ರವಿದೆ. ನಮ್ಮ ರಾಷ್ಟ್ರಧ್ವಜವನ್ನು ಇದು ಹೊಕ್ಕ ನಂತರ ನಾವದನ್ನು 'ಅಶೋಕ ಚಕ್ರ'ವೆಂದು ಕರೆದಿದ್ದೇವೆ. ತ್ರಿಜ್ಯಗಳಾಗಿ ಚಕ್ರವನ್ನು ಕೇಂದ್ರಕ್ಕೆ ಕೂಡಿಸುವ ಇಪ್ಪತ್ತನಾಲ್ಕು ಕಂಬಿಗಳು; ಬೌದ್ಧರ ಪ್ರಕಾರ ಧರ್ಮ ಜೀವನಕ್ಕೆ ಬೇಕಾದ ಇಪ್ಪತ್ತನಾಲ್ಕು ಸೂತ್ರಗಳು. ಹುಟ್ಟಿನಿಂದ ಸಾವಿನತನಕ ಜೀವ ಸಾಗಿಹೋಗುವ ಪರಿ.

ಸ್ವತಂತ್ರಾರ್ಥವಿರುವುದು ಹನ್ನೆರಡು ಕಂಬಿಗಳಿಗೆ. ಅವೇ ಹನ್ನೆರಡು ಮತ್ತೆ ಪ್ರತಿಮುಖವಾಗಿ ಸುತ್ತಿ ಚಕ್ರವನ್ನು ಪೂರ್ಣಗೊಳಿಸುತ್ತವೆ. ಇದನ್ನೇ ಬೌದ್ಧರು 'ದ್ವಾದಶ ನಿದಾನ'ವೆಂದು ಕರೆಯುತ್ತಾರೆ. ಚಕ್ರದ ಮೊದಲ ಕಂಬಿ ಅವಿದ್ಯೆ (ಮುಗ್ಧತೆ) ಆದರೆ, ಮೂರನೆಯದು ವಿಜ್ಞಾನ(ಜಾಗ್ರತೆ). ಅವಿದ್ಯೆಯಿಂದ ವಿಜ್ಞಾನಕ್ಕೆ ಚಲಿಸಿದ ಧರ್ಮ ಮತ್ತೆ ಹಿಮ್ಮೊಗವಾಗಿ ಚಲಿಸಿ ವಿಜ್ಞಾನದಿಂದ ಮುಗ್ಧತೆಯನ್ನು ಮುಟ್ಟುತ್ತದೆ. ಮುಗ್ಧ, ಜ್ಞಾನೋದಯವನ್ನು ಅರಸುತ್ತಾನೆ ಮತ್ತು ಜ್ಞಾನೋದಯಗೊಂಡವನು ಮುಗ್ಧತೆಯನ್ನು ಬಯಸುತ್ತಾನೆ. ಬುದ್ಧನಿಗೆ ಕಂಡ ಜೀವನ ಚಕ್ರವಿದು. ಸಿಂಹ–ಲಾಂಛನ ಮತ್ತು ಧರ್ಮಚಕ್ರವನ್ನು ಹೊತ್ತ ಇದೇ ಸಾರನಾಥದಲ್ಲಿಯೇ ಬುದ್ಧ ತನ್ನ ಜ್ಞಾನೋದಯದ ನಂತರ ಮೊದಲ ಬೋಧನೆಯನ್ನು ನೀಡಿದ್ದು. ಸಿಂಹಲಾಂಛನ ಸಿಕ್ಕ ಇದೇ ಜಾಗದಲ್ಲಿಯೇ ಧ್ಯಾನದಲ್ಲಿರುವ ಅಕ್ಷಿ ನಿಮೀಲಿತ ಬುದ್ಧನ ಸುಂದರ ಪ್ರತಿಮೆಯೂ ಸಿಕ್ಕಿದೆ. ನಾನು ಕಂಡ ಬುದ್ಧ ಪ್ರತಿಮೆಗಳಲ್ಲೇ ಅತಿ ಸುಂದರವಾದದ್ದು ಇದು. ಅಶೋಕ ಲಾಂಛನವು ರಾಷ್ಟ್ರಚಿಹ್ನೆಯಾದಾಗ ಅಡಿಯಲ್ಲಿ ನಾವು ಬರೆಯುವ ಉಪನಿಷತ್ತಿನ ವಾಕ್ಯ 'ಸತ್ಯಮೇವ ಜಯತೇ' ಮೂಲ ಲಾಂಛನದ ಕೆಳಗೆ ಬರೆದಿಲ್ಲ. ಸತ್ಯ–ಅಸತ್ಯಗಳು ಚಕ್ರದ ಭಾಗಗಳಾಗಿ ತಿರುಗುತ್ತವೆ ಎಂದು ನಂಬುವ ಬೌದ್ಧರಿಗೆ ಸತ್ಯವೊಂದೇ ಜಯಿಸುತ್ತದೆ ಎಂದು ಹೇಳುವ ಅಗತ್ಯವಿಲ್ಲ.

ಇಡೀ ವಾರಾಣಸಿಯಲ್ಲಿ ಯಾವುದನ್ನೂ 'ಇದಿಷ್ಟೇ' ಎಂದು ಹೇಳಲಾಗುವುದಿಲ್ಲ. ಕಂಪ್ಯೂಟರ್ ಪ್ರೊಗ್ರಾಮಿಂಗಿನಲ್ಲಿ 'ಬೈನರಿ' ಎನ್ನುವ ಕಾನ್ಸೆಪ್ಟ್